# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/228/12-13

ದಿನಾಂಕ :16-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಅಜಯ್ ಎಂ ಘೋರ್ಪಡೆ ತಂದೆ ಎಂ ವೈ ಘೋರ್ಪಡೆ, ಶಿವಪುರ, ಸಂಡೂರು<br><br>**ಶ್ರೀ ಡಿ. ಮಹೇಂದ್ರನಾಥ , ವಕೀಲರು, ಬಳ್ಳಾರಿ** | 1. ತಹಶೀಲ್ದಾರರು, ಸಂಡೂರು<br>2. ಶ್ರೀ ಬಿ. ವಿ. ಕುಂಟೆ, ಶಿವತೀರ್ಥ, ಮನೆ ನಂ 219, ವಾರ್ಡ್ ನಂ 14, ಪ್ಲಾಟ್ ನಂ 11, ಕೆ. ಹೆಚ್. ಬಿ. ಕಾಲೋನಿ, ಸಂಡೂರು<br>3. ಶ್ರೀ ಶೈಲೇಶ್ ಎಲ್ ದಳವಿ, 1461/ಬಿ. ಗೋಕುಲ್ ವಾಡಿ, ದೇಸಾಯಿ ನಗರ, ಸ್ಯಾಕ್ಲಿಂ, ಗೋವಾ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ಲಕ್ಷ್ಮೀಪುರ | 331 | 150-00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಸಂಡೂರು ಇವರ ಆದೇಶ ಸಂ/ಕಂ/ಪಹಣಿ/ಹಬವಿವಾದ/45/2011-12 ದಿನಾಂಕ 25/06/2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 12-11-2013, 28-07-2015, ಮತ್ತು 16-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 30-07-2012 ರಂದು ಈ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುತ್ತಾ , ಪ್ರತಿವಾದಿ (1) ರವರ ದಿನಾಂಕ 25-06-2012 ರ ಆದೇಶವನ್ನು ರದ್ದುಗೊಳಿಸಿ ಸಂಡೂರು ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮದ ಸ.ನಂ 331 ವಿಸ್ತೀರ್ಣ ವಿಸ್ತೀರ್ಣ 150-00 ಎಕರೆ ಸದರಿ ಜಮೀನು ರಾಜಮಾತೆಯವರು ದಿನಾಂಕ 11-05-2010 ಗೋವಾದಲ್ಲಿ ನೊಂದಾಯಿಸಿರುವ ಮರಣ ಪತ್ರದಂತೆ ಅವರ ಎಲ್ಲಾ ಮಕ್ಕಳು ವಿವಾದಿತ ಆಸ್ತಿಗೆ ಹಕ್ಕುದಾರರೆಂದು ಮತ್ತು ಈ ಆಸ್ತಿಮೇಲಿನ ಹಕ್ಕು ಶ್ರೀಮತಿ ಸುಶೀಲಾದೇವಿಯವರಿಗೆ, ಶ್ರೀ ಯಶವಂತರಾವ್ ಘೋರ್ಪಡೆ ಇವರು ಮಾಡಿಕೊಟ್ಟಿದ್ದ ವಿಲ್(ಮೃತ್ಯು-ಪತ್ರ) ದಂತೆ ಹಕ್ಕುಬದಲಾವಣೆ ಮಾಡಲು ಪ್ರತಿವಾದಿ (2) ರವರು ಕೋರಿರುವುದನ್ನು ತಳ್ಳಿಹಾಕಿ ವಾದಿಹೆಸರಿಗೆ ಸದರಿ ಜಮೀನನ್ನು ವರ್ಗಾಯಿಸಿದಲ್ಲಿ ತದನಂತರ ವಾದಿಯು ತನ್ನ ತಾತನಾದ ಶ್ರೀ ಎಂ.ವೈ ಘೋರ್ಪಡೆ ಇವರ ಇಚ್ಛೆಯಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರಿಗೆ ದಿನಾಂಕ 02-07-2011 ರ

ಪತ್ರದಂತೆ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಅನುಕೂಲವಾಗಿತ್ತದೆಂದು ಹಾಗೂ ವೈ.ಆರ್ ಘೋರ್ಪಡೆ ಇವರ ದಿನಾಂಕ 09-12-1972 ರ ವಿಲ್ ನಂತೆ ಮಾಡಬಹುದೆಂದು ಕೋರಿರುತ್ತಾರೆ. ಪರ್ಯಾಯವಾಗಿ ಪ್ರಸ್ತಾಪಿತ ಜಮೀನನ್ನು ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ ಹೆಸರಿಗೆ ನೇರವಾಗಿ ಹಕ್ಕುಬದಲಾವಣೆ ಮಾಡಲು ಪ್ರಾರ್ಥಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿ (2) ರವರು ಮೇಲ್ಮನವಿಗೆ ಆಕ್ಷೇಪಣೆಗಳನ್ನು ಸಲ್ಲಿಸುತ್ತಾ ದಿವಂಗತ ರಾಜಮಾತೆ ಶ್ರೀಮತಿ ಸುಶೀಲದೇವಿ ಘೋರ್ಪಡೆಯವರ ಮೃತ್ಯು-ಪತ್ರ ದ ಪ್ರಕಾರ ಅವರ ಪಿತಾರ್ಜಿತ ಆಸ್ತಿಯನ್ನು ನಿರ್ವಹಿಸಿಕೊಂಡು ಸಂರಕ್ಷಿಸಿಕೊಳ್ಳಲು ವಾದಿಸಮೇತ ಎಲ್ಲಾ ವಾರಸುದಾರರಿಗೆ ನ್ಯಾಯಯುತವಾದ ಸಮಾನದಹಕ್ಕು ಮತ್ತು ಅಧಿಕಾರವನ್ನು ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

ಪ್ರಕರಣವು ಮೃತ್ಯು-ಪತ್ರ ಆಧರಿಸಿ ಹಕ್ಕುದಾಖಲೆ ಮಾಡಿಕೊಡಲು ಕೊಡಲು ಕೋರಿದ್ದು, ವಿಲ್ ನೊಂದಾಯಿತವಾಗಿದ್ದಾದಲ್ಲಿ ಅಥವಾ ನೋಂದಾಯಿತ ವಲ್ಲದ ವಿಲ್ ಇರಲಿ ಅದರ ಸಿಂಧುತ್ವ, ಕ್ರಮ ಬದ್ಧತೆಯನ್ನು ಕೇವಲ ದಿವಾನಿ ನ್ಯಾಯಾಲಯದಲ್ಲಿ ಮಾತ್ರ ನಿರ್ಧರಿಸುವ ಅಧಿಕಾರವ್ಯಾಪ್ತಿ ಹೊಂದಿರುತ್ತದೆ. ಕಾರಣ ದಿನಾಂಕ 25-06-2012 ರಂದು ಪ್ರತಿವಾದಿ (1) ರವರು ಮಾಡಿರುವ ಆದೇಶವು ಸೂಕ್ತವಿರುವುದರಿಂದ, ಪ್ರಕರಣವು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆ ನೆಡೆಸುವುದು ಸೂಕ್ತವಲ್ಲವೆಂದು ಮನವರಿಕೆಯಾಗಿರುವುದರಿಂದ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಈ ಕೆಳಕಂಡ ಆದೇಶ.

## :: ಆದೇಶ ::

**ಮೇಲ್ಮನವಿಯನ್ನು ವಜಾಗೋಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ತಹಶೀಲ್ದಾರರು ಸಂಡೂರು ಇವರ ಆದೇಶ ಸಂಖ್ಯೆ ಕಂ/ಪಹಣಿ/ಹಬವಿವಾದ/45/2011-12 ದಿನಾಂಕ 25-06-2012 ರ ಆದೇಶವನ್ನು ಎತ್ತಿಹಿಡಿದೆ. ಸಂಡೂರು ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮದ ಸ.ನಂ 331 ವಿಸ್ತೀರ್ಣ: 150-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಇದೇ ಹಂತದಲ್ಲಿ ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನುಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 16-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

**ಪ್ರತಿಯನ್ನು :** ತಹಶೀಲ್ದಾರರು ಸಂಡೂರು ಇವರಿಗೆ ಮೂಲಕಡತ ಸಂಖ್ಯೆ ಕಂ/ಪಹಣಿ/ಹಬ ವಿವಾದ/45/11-12 ದಿನಾಂಕ 25-06-2012 ರ ಮೂಲ ಕಡತವನ್ನು ಕಳುಹಿಸಿದೆ.